# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ. 24/2 ಮತ್ತು 24/3 (ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ),
21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070
**Email : krvp.info@gmail.com || Website : www.krvp.org**

## ದಿನಾಂಕ 12.10.2014 ರಂದು ಕರಾವಿಪ ವಿಜ್ಞಾನ ಭವನದಲ್ಲಿ ಜರುಗಿದ ಕರಾವಿಪ ಸರ್ವಸದಸ್ಯರ 33ನೇ ವಾರ್ಷಿಕ ಮಹಾಸಭೆಯ ನಡವಳಿಯ ಅನುಪಾಲನೆ ಹಾಗೂ ಅನುಷ್ಠಾನ ವರದಿ.

| ಕ್ರಮ ಸಂಖ್ಯೆ | ನಡವಳಿ ಸಂಖ್ಯೆ | ವಿಷಯ | ಅನುಪಾಲನಾ ವರದಿ |
|---|---|---|---|
| 1. | **2.1** (ಇ) | ಕರಾವಿಪ ವಿಜ್ಞಾನಭವನದಲ್ಲಿ ಡಾ॥ ಸ. ಜ. ನಾಗಲೋಟಿಮಠ ಪ್ರಯೋಗಾಲಯ ಕೇಂದ್ರವೊಂದನ್ನು ಸ್ಥಾಪನೆ ಮಾಡುವುದು.<br>**– ಪ್ರೊ॥ ಸಿ.ಡಿ. ಪಾಟೀಲ, ರಾಯಚೂರು** | ಕರಾವಿಪ ವಿಜ್ಞಾನಭವನದಲ್ಲಿ ಪ್ರಯೋಗಾಲಯ ನಿರ್ಮಾಣಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಈಗಾಗಲೇ ಪ್ರಸ್ತಾವನೆಯೊಂದನ್ನು ಸಲ್ಲಿಸಲಾಗಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| 2. | 2.2 | ಕರಾವಿಪ ಸದಸ್ಯರ ಸಂಖ್ಯೆ ಹೆಚ್ಚಾಗಬೇಕು. ಎಲ್ಲಾ ಜಿಲ್ಲೆಗಳಲ್ಲಿ ಸದಸ್ಯತ್ವ ಅಭಿಯಾನ ಕೈಗೊಳ್ಳಬೇಕು. ಸದಸ್ಯತ್ವ ಶುಲ್ಕವನ್ನು ಕಡಿಮೆ ಮಾಡಬೇಕು.<br>**– ಶ್ರೀ ಎ.ಎಸ್. ನಟರಾಜ್, ಬೆಂಗಳೂರು** | ಈ ಕುರಿತು ಕರಾವಿಪ ಕಾರ್ಯಕಾರಿ ಸಮಿತಿ ಸದಸ್ಯರು, ಜಿಲ್ಲಾ ಸಮಿತಿಗಳ ಅಧ್ಯಕ್ಷರು ಹಾಗು ಕಾರ್ಯದರ್ಶಿಗಳಿಗೆ ದಿನಾಂಕ 23.02.2015ರಂದು ಪತ್ರ ಕಳುಹಿಸಿ ಆಯಾ ಜಿಲ್ಲೆಗಳಲ್ಲಿ ಕರಾವಿಪ ಸದಸ್ಯತ್ವ ಅಭಿಯಾನವನ್ನು ಕೈಗೊಂಡು ಎಲ್ಲ ವರ್ಗಗಳ ವಿಜ್ಞಾನಾಸಕ್ತರನ್ನು ಕರಾವಿಪದ ಸದಸ್ಯತ್ವ ಪಡೆಯಲು ಪ್ರೇರೇಪಿಸಬೇಕೆಂದು ವಿನಂತಿಸಲಾಗಿದೆ. |
| | 2.2 | ಕರಾವಿಪ ಸದಸ್ಯತ್ವ ಶುಲ್ಕ ಕಡಿಮೆ ಮಾಡುವ ಕುರಿತು.<br>**– ಶ್ರೀ ಎ.ಎಸ್. ನಟರಾಜ್, ಬೆಂಗಳೂರು.** | ಈ ಕುರಿತುಕರಾವಿಪ ನಿಯಮಾವಳಿಗಳ ಪರಿಷ್ಕರಣೆ / ತಿದ್ದುಪಡಿ ಸಮಿತಿಯ ಮುಖ್ಯಸ್ಥರಾಗಿರುವ ಕರಾವಿಪ ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್ರಿಸ್ವಾಮಿ–ಇವರಿಗೆ ದಿನಾಂಕ 06.04.2015ರಂದು ಪತ್ರ ಬರೆಯಲಾಗಿದೆ. |
| 2. | 2.4 (ಅ) | ಮೂಢನಂಬಿಕೆಗಳ ಕುರಿತಾದ ಕರಡು ಮಸೂದೆಯನ್ನು ಮಂಡಿಸಲು ಹತ್ತು ಜನ ಶಾಸಕರ ಸಹಿಯೊಂದಿಗೆ ಗಮನ ಸೆಳೆಯುವ ಸೂಚನೆಯನ್ನು ಶಾಸಕರು ಹಾಗೂ ಕರಾವಿಪ ಅಧ್ಯಕ್ಷರೂ ಆಗಿರುವ ಶ್ರೀ ಎಸ್.ವಿ. ಸಂಕನೂರರವರು ವಿಧಾನ ಪರಿಷತ್ತಿನ ಸಭಾಧ್ಯಕ್ಷರಿಗೆ ನೀಡಬೇಕು. | ಈ ವಿಷಯವನ್ನು ಮುಂದಿನ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಲು ದಿನಾಂಕ 06.04.2015ರಂದು ಕರಾವಿಪದ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರೂ ಆಗಿರುವ ಶ್ರೀ ಎಸ್. ವಿ. ಸಂಕನೂರರವರಲ್ಲಿ ಮನವಿ ಮಾಡಲಾಗಿದೆ. |
| | 2.4 (ಆ) | ಕರಾವಿಪ ಮುಂಭಾಗದ 21ನೇ ಮುಖ್ಯರಸ್ತೆಗೆ "ವಿಜ್ಞಾನಭವನ ರಸ್ತೆ" ಎಂದು ಮರು ನಾಮಕರಣ ಮಾಡುವ ಕುರಿತು.<br>**– ಶ್ರೀ ಯು. ಭೂಪತಿ, ಬೆಂಗಳೂರು** | ಈ ಸಂಬಂಧ ದಿನಾಂಕ 06.04.2015ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ವಿನಂತಿ ಪತ್ರವನ್ನು ಕಳುಹಿಸಲಾಗಿದೆ ಹಾಗೂ ಅನುಸರಣಾ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. |
| 3. | 2.5 | ಕಾರ್ಯಕಾರಿ ಸಮಿತಿಯಲ್ಲಿ ಕಡ್ಡಾಯವಾಗಿ ಒಬ್ಬ ವಿಜ್ಞಾನಿ ಇರಬೇಕು. ಇಲ್ಲದಿದ್ದಲ್ಲಿ ಕನಿಷ್ಠಪಕ್ಷ ಹಿರಿಯ ವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞರುಗಳ ಸಲಹಾ ಸಮಿತಿಯೊಂದನ್ನಾದರೂ ರಚಿಸಬೇಕು.<br>**– ಡಾ. ವಿ. ಜಗನ್ನಾಥ್, ಮೈಸೂರು** | ಕರಾವಿಪದಲ್ಲಿ ಶೈಕ್ಷಣಿಕ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ॥ ಕೆ. ಎಸ್. ನಟರಾಜ್‌ರವರಿಗೆ ಈ ಜವಾಬ್ದಾರಿಯನ್ನು ನೀಡಲಾಗಿದ್ದು, ಸಾಧ್ಯವಾದಷ್ಟೂ ಶೀಘ್ರವಾಗಿ ವಿಜ್ಞಾನಿಗಳು, ಶಿಕ್ಷಣ ತಜ್ಞರು ಹಾಗೂ ಆಡಳಿತ ತಜ್ಞರು ಸೇರಿದಂತೆ ಸಲಹಾ ಸಮಿತಿಯನ್ನು ರಚಿಸಿ ಹೊಸ ಹಾಗೂ ನವೀನತೆಯುಳ್ಳ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಕಾರ್ಯೋನ್ಮುಖವಾಗುವಂತೆ ಕೋರಿದೆ. |
| 4. | 2.7 (i) | **i.** ಕರಾವಿಪ ಕಾರ್ಯಕಾರಿ ಸಮಿತಿಯಲ್ಲಿ ಹಾಗೂ ಜಿಲ್ಲಾ ವಿಜ್ಞಾನ ಸಮಿತಿಗಳಲ್ಲಿ ದಲಿತರು ಹಾಗೂ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವುದು.<br>**ii.** ಬಿಜಾಪುರ ಜಿಲ್ಲಾ ಸಮಿತಿಯ ಪುನರ್‌ರಚನೆ ನಿಯಮಾವಳಿಯಂತೆ ಆಗಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.<br>**iii.** ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದ ರಾಷ್ಟ್ರಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಕೃಪಾಂಕ, ಪ್ರಾತಿನಿಧ್ಯ ಹಾಗೂ ಆದ್ಯತೆ ನೀಡಬೇಕು.<br>**– ಶ್ರೀ ಜಿ.ಎಸ್. ಕಾಂಬ್ಳೆ, ಬಿಜಾಪುರ** | ಈ ಕುರಿತು ಕರಾವಿಪದ ಬೈಲಾ ನಿಯಮಾವಳಿಗಳ ಪರಿಷ್ಕರಣೆ / ತಿದ್ದುಪಡಿ ಸಮಿತಿಗೆ ಪರಿಶೀಲನೆಗಾಗಿ ಪತ್ರ ಬರೆಯಲಾಗಿದೆ.<br>ಈ ಬಗ್ಗೆ ದಿನಾಂಕ 06.04.2015ರಂದು ರಾಜ್ಯದ ಮುಖ್ಯಮಂತ್ರಿಯಾದ ಶ್ರೀ ಸಿದ್ಧರಾಮಯ್ಯನವರಿಗೆ ಹಾಗೂ ಪ್ರೌಢ ಹಾಗೂ ಪ್ರಾಥಮಿಕ ಶಿಕ್ಷಣ ಸಚಿವರಾದ<br>ಶ್ರೀ ಕಿಮ್ಮನೆರತ್ನಾಕರ –ಇವರಿಗೆ ವಿನಂತಿ ಪತ್ರ ಕಳುಹಿಸಲಾಗಿದ್ದು; ಪ್ರಸ್ತುತ ಮಾನ್ಯ ಶಿಕ್ಷಣ ಸಚಿವರು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ವಿಷಯವನ್ನು ಪರಿಶೀಲಿಸಲು ಸೂಕ್ತ ನಿರ್ದೇಶನ ನೀಡಿರುತ್ತಾರೆಂದು ತಿಳಿದು ಬಂದಿದೆ. |

| | | | |
|---|---|---|---|
| 5. | 2.8 | ಜಿಲ್ಲಾ ವಿಜ್ಞಾನ ಸಮಿತಿಗಳೊಂದಿಗೆ ಸಮರ್ಪಕ ಮಾಹಿತಿ ಸಂವಹನಕ್ಕಾಗಿ ಸಾರ್ವಜನಿಕ ಸಂಪರ್ಕಾಧಿಕಾರಿ (PRO) ನೇಮಕ ಆಗಬೇಕು.<br>**– ನಳಿನಾ ಡಿ.** | ಈ ಕುರಿತು ಕರಾವಿಪ ಕೇಂದ್ರ ಕಚೇರಿಯಲ್ಲಿ ಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ.ಎಸ್. ಸರ್ವದೆಯವರನ್ನು ಜಿಲ್ಲಾ ಸಮಿತಿಗಳೊಂದಿಗೆ ಸಮನ್ವಯಕ್ಕಾಗಿ ಸಂಪರ್ಕಾಧಿಕಾರಿ ಎಂದು ನಿಯೋಜಿಸಲಾಗಿದೆ. |
| 6. | 2.10<br>(ಅ)<br><br>(ಆ)<br><br>(ಇ)<br><br>4.3 | ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದ ಸಂದರ್ಭದಲ್ಲಿ ಪ್ರತಿಯೊಂದು ಜಿಲ್ಲೆಗೆ ಬಿಡುಗಡೆಯಾಗುತ್ತಿರುವ ಅನುದಾನದ ಮೊತ್ತವನ್ನು ಹೆಚ್ಚಿಸುವುದು.<br><br>ಇತ್ತೀಚೆಗೆ ಜಿಲ್ಲಾಮಟ್ಟದ ಸಮಾವೇಶಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಈ ಕುರಿತು ತುರ್ತಾಗಿ ಕ್ರಮಕೈಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.<br><br>ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಸಮಿತಿಗಳು ಅನುಷ್ಠಾನಗೊಳಿಸುವ ಕಾರ್ಯಕ್ರಮ/ ಚಟುವಟಿಕೆಗಳ ವರದಿಯನ್ನು ಬಾಲವಿಜ್ಞಾನ ಮಾಸ ಪತ್ರಿಕೆಯಲ್ಲಿ ಪ್ರಕಟಿಸುವ ಕುರಿತು.<br><br>ರಾಜ್ಯಮಟ್ಟದ ಅಥವಾ ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಭಾಗವಹಿಸುವ ವಿದ್ಯಾರ್ಥಿನಿಯರ ಜೊತೆ ಮಹಿಳಾ ಶಿಕ್ಷಕರೊಬ್ಬರನ್ನು ನಿಯೋಜಿಸುವ ಕುರಿತು ಸದಸ್ಯರೊಬ್ಬರು ನೀಡಿದ ಸಲಹೆಗೆ ಸಭೆಯು ಅನುಮೋದನೆ ಸೂಚಿಸಿತು.<br>**ಜಿ. ವೆಂಕಟಸ್ವಾಮಿ** | **2.10 (ಅ) ಮತ್ತು (ಆ) ಹಾಗೂ 4.3**<br><br>ಈ ಕುರಿತು 2015–16ನೇ ಸಾಲಿನ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮುನ್ನ ಪರಿಶೀಲನೆ ಹಾಗೂ ಸೂಕ್ತ ಕ್ರಮಕ್ಕಾಗಿ ಮಾನ್ಯ ಸದಸ್ಯರ ಸಲಹೆಗಳನ್ನು ರಾಜ್ಯ ಸಂಯೋಜಕರ ಗಮನಕ್ಕೆ ತರಲಾಗುವುದು.<br><br>ಈ ಸಂಬಂಧ ರಾಜ್ಯದ ಎಲ್ಲ ಜಿಲ್ಲಾ ಸಮಿತಿಗಳಿಗೆ ದಿನಾಂಕ 11.08.2015 ನೆನಪೋಲೆಯನ್ನು ಕಳುಹಿಸಲಾಗಿದೆ. ಇದಲ್ಲದೆ ಬಾಲವಿಜ್ಞಾನ ಮಾಸ ಪತ್ರಿಕೆಯ ಸಂಪಾದಕರಾಗಿರುವ ಡಾ. ಶೇಖರ್‌ಗೌಳೇರ್‌ರವರಿಗೂ ದಿನಾಂಕ 06.04.2015 ರಂದು ಪತ್ರ ಬರೆಯಲಾಗಿದೆ. |
| | 4(4.1) | ಕೇಂದ್ರ ಸರ್ಕಾರದರಾಷ್ಟ್ರೀಯ ಪರಿಸರಜಾಗೃತಿ ಆಂದೋಲನ ಕಾರ್ಯಕ್ರಮದಡಿಯಲ್ಲಿ MOEF ನಿಂದ ಸುಮಾರು 10 ವರ್ಷಕ್ಕೂ ಮೀರಿದ ಅವಧಿಗೆ ಒಟ್ಟು ರೂ. 15.00 ಲಕ್ಷ RRA Fee ಸ್ವೀಕೃತಿಯಾಗಬೇಕಿದ್ದು, ಇದನ್ನು ಪಡೆಯುವಲ್ಲಿ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲು ಸೂಚಿಸಿದರು.<br>**– ಶ್ರೀ ಜಿ. ವೆಂಕಟಸ್ವಾಮಿ, ಬೆಂಗಳೂರು** | ಈ ಸಂಬಂಧ ಕರಾವಿಪವು ನಿರಂತರವಾಗಿ ಅನುಸರಣಾ ಕ್ರಮ ಕೈಗೊಳ್ಳುತ್ತಿರುವುದನ್ನು ಖಜಾಂಚಿ ಶ್ರೀ ಗಿರೀಶ್ ಕಡ್ಲೇವಾಡರವರು ಮಾನ್ಯ ಸದಸ್ಯರ ಗಮನಕ್ಕೆ ತಂದರು. ಈ ಕುರಿತು ಕೇಂದ್ರ ಸರ್ಕಾರ ಅರಣ್ಯ ಮತ್ತು ಪರಿಸರ ಇಲಾಖೆಗೆ ಪತ್ರ ಬರೆಯಲಾಗಿದೆ. |
| 7. | 8 | ದಾನಿ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಕಾರ್ಯಕಾರಿ ಸಮಿತಿ ಸದಸ್ಯರ ಸಂಖ್ಯೆಯನ್ನು ನಿಗದಿಗೊಳಿಸುವುದು. ಗುಪ್ತ ಮತದಾನ ವ್ಯವಸ್ಥೆಯನ್ನೊಳಗೊಂಡಂತೆ ಚುನಾವಣಾ ನಿಯಮಗಳ ಪರಿಷ್ಕರಣೆ, ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು ಜಿಲ್ಲಾ ವಿಜ್ಞಾನ ಸಮಿತಿಗಳಲ್ಲಿ ಯಾವ ಪದಾಧಿಕಾರಿ ಜವಾಬ್ದಾರಿಯನ್ನು ಹೊಂದಿರಕೂಡದು. ಜಿಲ್ಲಾ ವಿಜ್ಞಾನ ಸಮಿತಿಗಳು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆಯಡಿಯಲ್ಲಿ ನೋಂದಾಯಿಸಿರಬೇಕು.<br>**– ಪ್ರೊ|| ಸಿ.ಡಿ. ಪಾಟೀಲ, ಶ್ರೀ ಎಮ್ಮಿ ಹಾಗೂ ರಾಯಚೂರುಜಿಲ್ಲೆಯ ಮತ್ತಿತರೆ ಸದಸ್ಯರು ಮುಂಚಿತವಾಗಿ ಪತ್ರ ಬರೆದು ನೀಡಿದ** | ಈ ಕುರಿತು ಅಧ್ಯಕ್ಷರು ಹಾಗೂ ಗೌರವ ಕಾರ್ಯದರ್ಶಿಯವರ ಸಹಿಯೊಂದಿಗೆ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ದಿನಾಂಕ 06.04.2015ರಂದು ಪತ್ರ ಬರೆಯಲಾಗಿದೆ. |

Sd/-
ಗೌರವ ಕಾರ್ಯದರ್ಶಿ